# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521

ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ದೂರವಾಣಿ ಸಂಖ್ಯೆ: 080-22212343

ಅಂತರ್ಜಾಲ: https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

ಸಂಖ್ಯೆ: ಕವಿಪ್ರನಿನಿ/ಕೆಸಿಓ-01/4976/2019-20/3489 ದಿನಾಂಕ: 23 NOV 2022

## ಸುತ್ತೋಲೆ

ವಿಷಯ: ದಿನಾಂಕ: 01.12.2012 ರ ನಂತರದ ಅವಧಿಯ 'ಸಿ' ಮತ್ತು 'ಡಿ' ಪದವೃಂದದವರ ಪಿಂಚಣಿದಾರರ ಭದ್ರತಾ ನಿಧಿ ಮಂಜೂರಾತಿಯನ್ನು ಸಂಬಂಧಿಸಿದ ಎಸ್ಕಾಂಗಳ ನಿಗಮ ಕಚೇರಿಯಲ್ಲಿ ನಿರ್ವಹಿಸುವ ಬಗ್ಗೆ.

ಉಲ್ಲೇಖ:
1. ಕವಿಮಂ ಆದೇಶ ಸಂಖ್ಯೆ: ಕೆಇಬಿ/ಸಿಎಲ್ಓ/ಎಸ್.ಎ-II/2261/89-20 ಬೆಂಗಳೂರು ದಿನಾಂಕ: 08.10.1998.
2. ಮುಖ್ಯ ಲೆಕ್ಕ ನಿಯಂತ್ರಣಾಧಿಕಾರಿ, ಕವಿಮಂ., ಬೆಂಗಳೂರು ರವರ ಪತ್ರ ಸಂಖ್ಯೆ: ಸಿವೈಎಸ್71 ದಿನಾಂಕ: 26.11.1998.
3. ಮುಖ್ಯ ಲೆಕ್ಕ ನಿಯಂತ್ರಣಾಧಿಕಾರಿ, ಕವಿಮಂ., ಬೆಂಗಳೂರು ರವರ ಪತ್ರ ಸಂಖ್ಯೆ: ಸಿವೈಎಸ್71 ದಿನಾಂಕ: 11.05.1999.
4. ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಸಿಎಲ್ಎ/ಎಸ್.ಎ-VII/2261/89-90 ಬೆಂಗಳೂರು ದಿನಾಂಕ: 06.03.2003.
5. ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ ಸಿಎಲ್ಎ/ ಎಸ್.ಎ-VII/2261/89-20 ಬೆಂಗಳೂರು ದಿನಾಂಕ: 24.01.2008.
6. ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ ಆ.ಸ(ಲೆ ಮತ್ತು ಸಂ)/ಕೆಸಿಓ-01/ 39729/ 12-13 ದಿನಾಂಕ: 05.11.2012
7. ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ ಸಿಎಲ್ಎ/ ಎಸ್.ಎ-VII/2261/89-90 ಬೆಂಗಳೂರು ದಿನಾಂಕ: 03.03.2018.
8. ಆರ್ಥಿಕ ಸಲಹೆಗಾರರು (ಎನ್‌ಡಿಸಿಪಿಎಸ್) ರವರ ಕಚೇರಿ ಪತ್ರ ಸಂಖ್ಯೆ: ಕವಿಪ್ರನಿನಿ/ಕೆಸಿಓ-01/26328/2021-22/5032 ದಿನಾಂಕ: 25.11.2021

AEE5 24/11/22

******

"ಕವಿಮಂ ಪಿಂಚಣಿದಾರರ ಕುಟುಂಬ ಹಿತ ನಿಧಿ/ಪಿಂಚಣಿದಾರರ ಭದ್ರತಾ ನಿಧಿ ಯೋಜನೆ"ಯನ್ನು ದಿನಾಂಕ: 01.11.1998 ರಿಂದ ಜಾರಿಗೆ ಬರುವಂತೆ ಉಲ್ಲೇಖ-1ರ ನಿಗಮದ ಆದೇಶದ ದಿನಾಂಕ: 08.10.1998 ರಲ್ಲಿ ಅನುಷ್ಠಾನಕ್ಕೆ ಬಂದಿರುತ್ತದೆ.

ಸದರಿ ಆದೇಶದನ್ವಯ ಪಿಂಚಣಿದಾರರ ಭದ್ರತಾ ನಿಧಿ ಯೋಜನೆಗೆ ಸದಸ್ಯರಾದ ಪಿಂಚಣಿದಾರರು/ಕುಟುಂಬ ಪಿಂಚಣಿದಾರರು ಮರಣ ಹೊಂದಿದಲ್ಲಿ, ಸಂಬಂಧಿಸಿದ ಪಿಂಚಣಿ ಬಟವಾಡೆ ವಿಭಾಗದಿಂದ ಪಿಂಚಣಿದಾರರ ಭದ್ರತಾ ನಿಧಿಗೆ ನಾಮನಿರ್ದೇಶಿತರಾದವರಿಂದ ಅರ್ಜಿ ಹಾಗೂ ಅಗತ್ಯ ದಾಖಲೆಗಳನ್ನು ಪಡೆದು ಭದ್ರತಾ ನಿಧಿಯನ್ನು ಮಂಜೂರು ಮಾಡಲು ನಾಮನಿರ್ದೇಶನ, ವಂತಿಗೆ ವಿವರಗಳ ನಮೂನೆ 'ಸಿ' ಹಾಗೂ ಪಿಂಚಣಿ ಪಾವತಿ ಆದೇಶಗಳೊಂದಿಗೆ ಪ್ರಸ್ತಾವನೆಯನ್ನು ಆರ್ಥಿಕ ಸಲಹೆಗಾರರು (ಎನ್‌ಡಿಸಿಪಿಎಸ್), ಕವಿಪ್ರನಿನಿಯ ನಿಗಮ ಕಚೇರಿಗೆ ಮಂಜೂರಾತಿಗಾಗಿ ಕಳುಹಿಸಲಾಗುತ್ತಿದೆ.

ಕವಿಪ್ರನಿನಿ ಪಿಂಚಣಿ ಶಾಖೆಯಲ್ಲಿ ಮೇಲ್ಕಂಡ ದಾಖಲೆಗಳನ್ನು ಸಂಬಂಧಿಸಿದ ಮೂಲ ಪಿಂಚಣಿ ಕಡತದೊಂದಿಗೆ ಪರಿಶೀಲಿಸಿ, ಪಿಂಚಣಿದಾರರ ಭದ್ರತಾ ನಿಧಿ ಮಂಜೂರು ಮಾಡಿದ ನಂತರ ನಾಮನಿರ್ದೇಶಿತರಿಗೆ/ ಹಕ್ಕುದಾರರಿಗೆ ಚೆಕ್ ಮೂಲಕ ಪಾವತಿಸಲು ಚೆಕ್ಕನ್ನು ಸಂಬಂಧಪಟ್ಟ ಪಿಂಚಣಿ ಬಟವಾಡೆ ವಿಭಾಗಗಳಿಗೆ ಕಳುಹಿಸಲಾಗುವುದು. ಸಂಬಂಧಪಟ್ಟ ದಾಖಲೆಗಳನ್ನು ಹಾಗೂ ಪಿಂಚಣಿದಾರರ ಭದ್ರತಾ ನಿಧಿ ಹಕ್ಕುದಾರರಿಗೆ ಪಾವತಿಸಿ ಮೇಲ್ಮುದ್ರೆ (Enfacement) ದಾಖಲಿಸಿದ ನಂತರ ಪಿಂಚಣಿ ಪಾವತಿ ಆದೇಶಗಳನ್ನು ಪಿಂಚಣಿ ಕಡತದಲ್ಲಿರಿಸಲಾಗುವುದು.

ಕವಿಪ್ರನಿನಿ ನೌಕರರ ಸೇವಾ ನಿಯಮಾವಳಿ ಅಧಿನಿಯಮ 243(2) ನ್ನು ಉಲ್ಲೇಖ-6 ರ ನಿಗಮದ ಅಧಿಸೂಚನೆ ದಿನಾಂಕ: 05.11.2012 ರನ್ವಯ ತಿದ್ದುಪಡಿ ಮಾಡಲಾಗಿದ್ದು, ದಿನಾಂಕ: 01.12.2012 ರ ನಂತರ 'ಸಿ' ಮತ್ತು 'ಡಿ' ಪದವೃಂದದ ನೌಕರರ ನಿವೃತ್ತಿ ಹಾಗೂ ಮರಣ ಸವಲತ್ತುಗಳನ್ನು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಗಳ ಆರ್ಥಿಕ ಸಲಹೆಗಾರರು ಅಧಿಕರಿಸಲು ಹಾಗೂ 'ಎ' ಮತ್ತು 'ಬಿ' ಪದವೃಂದದ ಅಧಿಕಾರಿಗಳ ನಿವೃತ್ತಿ ಹಾಗೂ ಮರಣ ಸವಲತ್ತುಗಳನ್ನು ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ), [ಪ್ರಸ್ತುತ ಆರ್ಥಿಕ ಸಲಹೆಗಾರರು (ಎನ್‌ಡಿಸಿಪಿಎಸ್)] ಕವಿಪ್ರನಿನಿ., ಕಾವೇರಿ ಭವನ, ಬೆಂಗಳೂರು ಇವರು ಅಧಿಕರಿಸಲು ಆದೇಶಿಸಲಾಗಿರುತ್ತದೆ.

ದಿನಾಂಕ: 01.12.2012 ರ ನಂತರ ನಿವೃತ್ತರಾದ 'ಸಿ' ಮತ್ತು 'ಡಿ' ಪದವೃಂದದ ನೌಕರರಿಗೆ ನಿವೃತ್ತಿ ಮತ್ತು ಮರಣ ಸವಲತ್ತುಗಳನ್ನು ಆಯಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿಯೇ ಅಧೀಕರಿಸಲಾಗುತ್ತಿದ್ದು, ಪಿಂಚಣಿದಾರರ ಮೂಲ ಕಡತಗಳನ್ನು ಆಯಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ನಿರ್ವಹಣೆ ಮಾಡಲಾಗುತ್ತಿದೆ. ಆದರೆ, ಪಿಂಚಣಿದಾರರ ಭದ್ರತಾ ನಿಧಿ ಯೋಜನೆಗೆ ಸದಸ್ಯರಾಗಿರುವ ಪಿಂಚಣಿದಾರರ ನಿಧನದ ನಂತರ ಸದರಿ ಪಿಂಚಣಿದಾರರ ಅರ್ಹ ವಾರಸುದಾರರಿಗೆ/ ನಾಮನಿರ್ದೇಶಿತರಿಗೆ ಭದ್ರತಾ ನಿಧಿಯನ್ನು ಮಂಜೂರು ಮಾಡಲು ಪ್ರಸ್ತಾವನೆಯೊಂದಿಗೆ ನೇರವಾಗಿ ಪಿಂಚಣಿ ಶಾಖೆ, ಕವಿಪ್ರನಿನಿ., ಬೆಂಗಳೂರು ರವರಿಗೆ ಸಂಬಂಧಪಟ್ಟ ವಿಭಾಗ ಕಚೇರಿಯಿಂದ ಸಲ್ಲಿಸಲಾಗುತ್ತಿದೆ. ಆದರೆ, ಪಿಂಚಣಿದಾರರ ಭದ್ರತಾನಿಧಿ ಮಂಜೂರಾತಿಗಾಗಿ ಕಳುಹಿಸುವ ದಾಖಲೆಗಳಲ್ಲಿನ ವಿವರಗಳನ್ನು ತಾಳೆ ಮಾಡಿ ಪರಿಶೀಲಿಸಲು ಈ ಕೆಳಕಂಡ ಮೂಲ ಪಿಂಚಣಿ ಕಡತಗಳ ಅವಶ್ಯಕತೆ ಇರುತ್ತದೆ:-

1. ಪಿಂಚಣಿದಾರನು ನಿವೃತ್ತರಾಗುವ ವೇಳೆಗೆ ಸಲ್ಲಿಸಲಾದ ಕುಟುಂಬ ಸದಸ್ಯರ ವಿವರ.
2. ನಮೂನೆ 'ಎ' ರಲ್ಲಿ ನಾಮನಿರ್ದೇಶನ ಮಾಡಿದಾಗ ಆಕರಿಸಲ್ಪಟ್ಟ ಪಿಂಚಣಿದಾರರ ರುಜು ಹಾಗೂ ಪಿಂಚಣಿ ಕಡತದಲ್ಲಿರುವ ಪಿಂಚಣಿದಾರರ ರುಜುವನ್ನು ನಮೂನೆ-ಎ ರಲ್ಲಿನ ನಾಮನಿರ್ದೇಶನ ದೊಂದಿಗೆ ತಾಳೆ ಮಾಡಲು ಪಿಂಚಣಿ ಕಡತ.
3. ಪಿಂಚಣಿ ಮಂಜೂರಾತಿಯಾಗಿರುವ ದಿನಾಂಕ.

ಮುಂದುವರೆದು, ಮೃತ ಪಿಂಚಣಿದಾರರ ಮೂಲ ಪಿಂಚಣಿ ಕಡತ ಹಾಗೂ ಪಿಪಿಓಗಳು ಆಯಾಯ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ನಿರ್ವಹಿಸುತ್ತಿರುವುದರಿಂದ, ಪಿಂಚಣಿದಾರರ ಭದ್ರತಾ ನಿಧಿ ಮಂಜೂರು ಮಾಡಿ ಪಾವತಿಸಲು, ಪಿಂಚಣಿ ಪಾವತಿ ಅದೇಶಗಳ ನೆರಳಚ್ಚು ಪ್ರತಿಗಳನ್ನು ಮಾತ್ರ ಕಳುಹಿಸಲಾಗುತ್ತಿದೆ. ಈ ರೀತಿ ನೆರಳಚ್ಚು ದಾಖಲೆಗಳ ಆಧಾರದಲ್ಲಿ ಪಿಂಚಣಿದಾರರ ಭದ್ರತಾ ನಿಧಿಯನ್ನು ಮಂಜೂರು ಮಾಡಿ ಹಾಗೂ ಪಾವತಿಸಿರುವ ಬಗ್ಗೆ ಮೂಲ ಕಡತದಲ್ಲಿನ ಯಾವುದೇ ದಾಖಲೆಗಳಲ್ಲಿ ಮೇಲ್ಮುದ್ರೆ (Enfacement) ದಾಖಲಿಸಿರದ ಕಾರಣದಿಂದ ಹಾಗೂ ಮೂಲ ಕಡತದೊಂದಿಗೆ ಇರುವ ದಾಖಲೆಗಳನ್ನು ಪರಿಶೀಲಿಸಲು ಸಾಧ್ಯವಾಗದ ಕಾರಣ ಭದ್ರತಾ ನಿಧಿ ಮೊತ್ತವು ಒಂದಕ್ಕಿಂತ ಹೆಚ್ಚು ಬಾರಿ ಕ್ಲೈಮ್ ಮಾಡುವ/ ಪಾವತಿಯಾಗುವ ಸಂಭವ ಇರುತ್ತದೆ.

ಈ ಹಿನ್ನೆಲೆಯಲ್ಲಿ ಮೂಲ ಪಿಂಚಣಿ ಕಡತವು ಲಭ್ಯವಿರುವ ಆಯಾ ಕಂಪನಿ ವತಿಯಿಂದಲೇ ಪಿಂಚಣಿದಾರರ ಭದ್ರತಾ ಠೇವಣಿಯ ಪ್ರಸ್ತಾವನೆಯನ್ನು ಮಂಜೂರು ಮಾಡಿ ಪಿಂಚಣಿದಾರರ ಭದ್ರತಾ ನಿಧಿ ಹಣವನ್ನು ಪಾವತಿ ಮಾಡಲು ನಿಯಂತ್ರಣಾಧಿಕಾರಿ (ಕಾಸ್ಟಿಂಗ್ ಮತ್ತು ತೆರಿಗೆ), ನಿಗಮ ಕಚೇರಿ, ಕವಿಪ್ರನಿನಿ., ಕಾವೇರಿ ಭವನ, ಬೆಂಗಳೂರು ರವರ ನಿಯಂತ್ರಣದಲ್ಲಿನ ಪಿಂಚಣಿ ಕೋಶ ಶಾಖೆಗೆ ಕಳುಹಿಸುವ ಕ್ರಮವಹಿಸುವುದು ಸೂಕ್ತವಾಗಿರುತ್ತದೆ. ಅಲ್ಲದೇ ಪಿಂಚಣಿದಾರರ ಮರಣದ ನಂತರ ಪಿಂಚಣಿ ಪಾವತಿ ಆದೇಶದ ಎರಡು ಭಾಗಗಳು ಆಯಾ ಕಂಪನಿಗಳಲ್ಲಿಯೇ ನಿರ್ವಹಿಸಲ್ಪಡುವುದರಿಂದ ಸದರಿ ಯೋಜನೆಯ ಮಂಜೂರಾತಿಯ ಹೊಣೆಗಾರಿಕೆಯು ಆಯಾ ಕಂಪನಿಯ ಮಟ್ಟದಲ್ಲಿಯೇ ಸೀಮಿತಗೊಳಿಸುವುದು ಸೂಕ್ತವಾಗಿರುತ್ತದೆ. ಇದರಿಂದಾಗಿ ಪಿಪಿಓಗಳಲ್ಲಿ ಸೂಕ್ತ ಮೇಲ್ಮುದ್ರೆ (Enfacement) ದೃಢೀಕರಣ ದಾಖಲಾಗುವುದರಿಂದ ಒಂದಕ್ಕಿಂತ ಹೆಚ್ಚು ಬಾರಿ ಪಿಂಚಣಿದಾರರ ಭದ್ರತಾ ನಿಧಿ ಪಾವತಿಯಾಗುವುದನ್ನು ತಡೆಯಬಹುದಾಗಿರುತ್ತದೆ.

ಆದ್ದರಿಂದ ದಿನಾಂಕ: 01.12.2012 ರ ನಂತರ ನಿವೃತ್ತರಾದ 'ಸಿ' ಮತ್ತು 'ಡಿ' ಪದವೃಂದದ ನೌಕರರ ಮೂಲ ಪಿಂಚಣಿ ಕಡತ ಹಾಗೂ ಪಿಂಚಣಿ ಪಾವತಿ ಆದೇಶಗಳು ಲಭ್ಯವಿರುವ ಆಯಾ ಕಂಪನಿ ಪಿಂಚಣಿ ಶಾಖೆಗಳಲ್ಲಿ ಲಭ್ಯವಿರುವುದರಿಂದ, ಪಿಂಚಣಿದಾರರ ಭದ್ರತಾ ನಿಧಿ ಸಂಬಂಧಿಸಿದ ಪ್ರಸ್ತಾವನೆಯು ಸಂಬಂಧಸಿದ ವಿಭಾಗದಿಂದ ಸ್ವೀಕೃತಿಯಾದ ನಂತರ, ಆಯಾ ವಿದ್ಯುತ್ ಸರಬರಾಜು ಕಂಪನಿಗಳ ಕಂಪನಿ ಕಾರ್ಯಾಲಯದಲ್ಲಿ ನಿಯಮಾನುಸಾರ ಪರಿಶೀಲಿಸಿ, ಪಿಂಚಣಿದಾರರ ಭದ್ರತಾ ನಿಧಿ ಮಂಜೂರು ಮಾಡಿ ಪಾವತಿಸಲು ಈ ಕೆಳಕಂಡ ಕ್ರಮಗಳನ್ನು ಜರುಗಿಸತಕ್ಕದ್ದು.

1) ದಿನಾಂಕ: 01.12.2012 ರ ನಂತರ ನಿವೃತ್ತರಾದ ಹಾಗೂ ಪಿಂಚಣಿದಾರರ ಭದ್ರತಾ ನಿಧಿ ಯೋಜನೆಗೆ ಸದಸ್ಯರಾಗಿರುವ 'ಸಿ' ಮತ್ತು 'ಡಿ' ಪದವೃಂದದ ಪಿಂಚಣಿದಾರರು ನಿಧನ ಹೊಂದಿರುವ ಪ್ರಕರಣಗಳಲ್ಲಿ ಸಂಬಂಧಿಸಿದ ಪಿಂಚಣಿ ಬಟವಾಡೆ ವಿಭಾಗದಿಂದ ಆಂತರಿಕ ಪರಿಶೋಧನೆಗೆ ಒಳಪಡಿಸಿದ ಪಿಂಚಣಿದಾರರ ಭದ್ರತಾ ನಿಧಿಯ ಪ್ರಸ್ತಾವನೆಯನ್ನು ಹಾಗೂ ಅಗತ್ಯ ದಾಖಲೆಗಳನ್ನು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯ ಕಂಪನಿ ಕಾರ್ಯಾಲಯದ ಪಿಂಚಣಿ ಶಾಖೆಯ ಮುಖ್ಯಸ್ಥರಿಗೆ ಕಳುಹಿಸುವುದು.

2) ಪಿಂಚಣಿದಾರರ ಭದ್ರತಾನಿಧಿ ಪ್ರಸ್ತಾವನೆಯನ್ನು ಆಯಾ ವಿದ್ಯುತ್ ಸರಬರಾಜು ಕಂಪನಿಗಳ ಕಂಪನಿ ಕಾರ್ಯಾಲಯದಲ್ಲಿ ಸ್ವೀಕರಿಸಿ, ಮೂಲ ದಾಖಲೆಗಳೊಂದಿಗೆ ಪರಿಶೀಲಿಸಿ ನ್ಯೂನತೆಗಳಿದ್ದಲ್ಲಿ ಸರಿಪಡಿಸಲು ಸಂಬಂಧಿಸಿದ ವಿಭಾಗಕ್ಕೆ ತಿಳಿಸುವುದು. ನಂತರ ಪ್ರಸ್ತಾವನೆಯೊಂದಿಗೆ ಕಳುಹಿಸಲಾದ ದಾಖಲೆಗಳಲ್ಲಿನ ವಿವರಗಳನ್ನು ನಿಯಮಾನುಸಾರ ಹಾಗೂ ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿಗಳು/ ಸುತ್ತೋಲೆ/ ಸ್ಪಷ್ಟೀಕರಣಗಳನುಸಾರ ಪರಿಶೀಲಿಸಿ, ಎಲ್ಲಾ ರೀತಿಯಲ್ಲಿ ಅರ್ಹವಿರುವ ಪ್ರಸ್ತಾವನೆಯನ್ವಯ ಪಿಂಚಣಿದಾರರ ಭದ್ರತಾ ನಿಧಿ ಮಂಜೂರು ಮಾಡಿದ ನಂತರ ಪಿಂಚಣಿದಾರರ ಭದ್ರತಾ ನಿಧಿ ಮಂಜೂರು ಮಾಡಿರುವ ಬಗ್ಗೆ ಪಿಂಚಣಿ ಪಾವತಿ ಆದೇಶದ ಮುಖ ಪುಟದಲ್ಲಿ ಮೇಲ್ಮುದ್ರೆ (Enfacement) ದಾಖಲಿಸುವುದು. ಸದರಿ ಮಂಜೂರಾತಿ ಆದೇಶ, ಹಕ್ಕುದಾರರಿಂದ ಸಹಿ ಮಾಡಿ ದೃಢೀಕರಿಸಲ್ಪಟ್ಟಿರುವ ಪೂರ್ವ ಸ್ವೀಕೃತಿ ನಮೂನೆ 'ಇ' (ದ್ವಿ ಪ್ರತಿಯಲ್ಲಿ) ಹಾಗೂ ಹಕ್ಕುದಾರರಿಂದ ಪಡೆದ ಬ್ಯಾಂಕ್ ಪಾಸ್ ಪುಸ್ತಕ ಪ್ರತಿ ಅಥವಾ ಹಕ್ಕುದಾರರ ಹೆಸರು ನಮೂದಾಗಿರುವ ರದ್ದುಗೊಳಿಸಿರುವ ಚೆಕ್ಕನ್ನು ನಿಯಂತ್ರಣಾಧಿಕಾರಿ(ಕಾಸ್ಟಿಂಗ್ ಮತ್ತು ತೆರಿಗೆ) ನಿಗಮ ಕಚೇರಿ, ಕವಿಪ್ರನಿನಿ., ಕಾವೇರಿ ಭವನ ರವರ ಕಚೇರಿಗೆ ಕಳುಹಿಸುವುದು ಹಾಗೂ ಸದರಿ ಕಚೇರಿಯೊಂದಿಗೆ ಈ ಬಗ್ಗೆ ಪತ್ರ ವ್ಯವಹಾರ ನಡೆಸುವುದು.

3) ಸದರಿ ಮಂಜೂರಾತಿ ಆದೇಶವನ್ನು ಪರಿಗಣಿಸಿ, ಲೆಕ್ಕಾಧಿಕಾರಿ (ಪಿಂಚಣಿ ಕೋಶ), ಕವಿಪ್ರನಿನಿ ಇವರು ಹಕ್ಕುದಾರರಿಗೆ, ಭದ್ರತಾ ನಿಧಿಯ ಮೊತ್ತವನ್ನು ಪಾವತಿಸಲು ಚೆಕ್ಕನ್ನು ಸಿದ್ಧಪಡಿಸುವುದು. ಸದರಿ ಚೆಕ್, ಚೆಕ್ ಲಗತ್ತಿಸಿ ಕಳುಹಿಸುವ ಪತ್ರ ಹಾಗೂ ಪೂರ್ವ ಸ್ವೀಕೃತಿ ನಮೂನೆ 'ಇ' ಯೊಂದಿಗೆ ಸಂಬಂಧಿಸಿದ ಪಿಂಚಣಿ ಬಟವಾಡೆ ವಿಭಾಗಕ್ಕೆ ಕಳುಹಿಸುವುದು ಹಾಗೂ ಪ್ರತಿಯನ್ನು ಸಂಬಂಧಿಸಿದ ಪಿಂಚಣಿ ಕಡತದಲ್ಲಿರಿಸಲು ಆಯಾ ಕಂಪನಿಗಳ ಕಂಪನಿ ಕಾರ್ಯಾಲಯದ ಪಿಂಚಣಿ ಶಾಖೆಗೆ ಕಳುಹಿಸುವುದು.

ಈ ಆದೇಶದ ದಿನಾಂಕದವರೆಗೆ ಸ್ವೀಕೃತಿಹೊಂದಿ ಬಾಕಿ ಇರುವ ಪಿಂಚಣಿದಾರರ ಭದ್ರತಾ ನಿಧಿಯ ಪ್ರಸ್ತಾವನೆಗಳನ್ನು ಆರ್ಥಿಕ ಸಲಹೆಗಾರರು (ಎನ್‌ಡಿಸಿಪಿಎಸ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ರವರ ಕಚೇರಿಯಲ್ಲಿ ಮಂಜೂರು ಮಾಡುವುದು. ಈ ಆದೇಶದ ನಂತರ ಪಿಂಚಣಿ ಬಟವಾಡೆ ವಿಭಾಗದವರು ಪಿಂಚಣಿದಾರರ ಭದ್ರತಾ ನಿಧಿ ಪ್ರಸ್ತಾವನೆಯನ್ನು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯ ಕಂಪನಿ ಕಾರ್ಯಾಲಯದ ಪಿಂಚಣಿ ಶಾಖೆಯ ಮುಖ್ಯಸ್ಥರಿಗೆ ಮಂಜೂರಾತಿಗಾಗಿ ಕಳುಹಿಸುವುದು ಹಾಗೂ ಮಂಜೂರಾತಿಯ ನಂತರ ಪಾವತಿಗಾಗಿ ನಿಯಂತ್ರಣಾಧಿಕಾರಿ (ಕಾಸ್ಟಿಂಗ್ ಮತ್ತು ತೆರಿಗೆ) ನಿಗಮ ಕಚೇರಿ, ಕವಿಪ್ರನಿನಿ, ಕಾವೇರಿ ಭವನ ರವರ ಕಚೇರಿಗೆ ಕಳುಹಿಸುವುದು.

ದಿನಾಂಕ: 01.12.2012 ರ ಪೂರ್ವದಲ್ಲಿ ನಿವೃತ್ತರಾದ 'ಸಿ' ಮತ್ತು 'ಡಿ' ಪಿಂಚಣಿದಾರರು, ಗುಂಪು 'ಎ' ಮತ್ತು 'ಬಿ' ಪದವೃಂದದ ಪಿಂಚಣಿದಾರರು ಹಾಗೂ ದಿನಾಂಕ: 01.02.2008 ರ ಪೂರ್ವದಲ್ಲಿ ಕುಟುಂಬ ಪಿಂಚಣಿ ಮಂಜೂರು ಮಾಡಲಾಗಿರುವ ಕುಟುಂಬ ಪಿಂಚಣಿದಾರರು ನಿಧನ ಹೊಂದಿರುವ ಪ್ರಕರಣಗಳಲ್ಲಿ ಸದರಿಯವರು ಪಿಂಚಣಿದಾರರ ಭದ್ರತಾ ನಿಧಿಗೆ ಸದಸ್ಯರಾಗಿದ್ದಲ್ಲಿ ಹಾಲಿ ಚಾಲ್ತಿಯಲ್ಲಿರುವಂತೆಯೇ ಆರ್ಥಿಕ ಸಲಹೆಗಾರರು (ಎನ್‌ಡಿಸಿಪಿಎಸ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ರವರ ಕಚೇರಿಯಲ್ಲಿ ಪಿಂಚಣಿದಾರರ ಭದ್ರತಾ ನಿಧಿ ಮಂಜೂರು ಮಾಡಲಾಗುತ್ತಿರುವುದನ್ನು ಮುಂದುವರೆಸಲಾಗಿದೆ. ಅದರಂತೆ ಈ ರೀತಿ ಪ್ರಕರಣಗಳಲ್ಲಿ ಪಿಂಚಣಿ ಭದ್ರತಾ ನಿಧಿ ಪ್ರಸ್ತಾವನೆ ಹಾಗೂ ದಾಖಲೆಗಳನ್ನು ನೇರವಾಗಿ ನಿಯಂತ್ರಣಾಧಿಕಾರಿಗಳು (ಲೆಕ್ಕಗಳು, ಪಿಂಚಣಿ ಮತ್ತು ಮುಂಗಡ), ನಿಗಮ ಕಚೇರಿ, ಕವಿಪ್ರನಿನಿ, ಕಾವೇರಿ ಭವನ, ಇವರಿಗೆ ಸಲ್ಲಿಸುವಂತೆ ತಿಳಿಸಲಾಗಿದೆ.

ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ

<u>ಪ್ರತಿಗಳು:</u>

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ ಎಸ್ಕಾಂ.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ ಎಸ್ಕಾಂ.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

<u>ಅಧೀಕ್ಷಕ ಇಂಜಿನಿಯರ್ (ಐ.ಟಿ ಮತ್ತು ಎಂ.ಐ.ಎಸ್) ರವರ ಮಾಹಿತಿಗಾಗಿ ಕಳುಹಿಸುತ್ತಾ ಆದೇಶದ ಪ್ರತಿಯನ್ನು</u>
<u>www.kptcl.com.karnataka.gov.in→eprasarana ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ವ್ಯವಸ್ಥೆ ಮಾಡುವುದು.</u>
<u>ಪ್ರತಿಗಳು ಮಾಹಿತಿಗಾಗಿ (ಜಾಲತಾಣದಲ್ಲಿ ಪ್ರಕಟಿಸಿದೆ)</u>

1. ಎಲ್ಲಾ ಅಧೀಕ್ಷಕ ಇಂಜಿನಿಯರ್/ನಿಯಂತ್ರಣಾಧಿಕಾರಿ/ನಿಯಂತ್ರಣಾಧಿಕಾರಿ(ಆಂ.ಪ)/ ಕವಿಪ್ರನಿನಿ/ ಎಸ್ಕಾಂ
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ಉಪ ಲೆಕ್ಕನಿಯಂತ್ರಣಾಧಿಕಾರಿ/ ಉಪ ಲೆಕ್ಕನಿಯಂತ್ರಣಾಧಿಕಾರಿ (ಆಂ.ಪ)/, ಕವಿಪ್ರನಿನಿ/ ಎಸ್ಕಾಂ
3. ಎಲ್ಲಾ ಲೆಕ್ಕಾಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ)/ ಕವಿಪ್ರನಿನಿ/ ಎಸ್ಕಾಂ

**ಪ್ರತಿಗಳು ಮಾಹಿತಿಗಾಗಿ:**

1. ಶ್ರೀ.ಆರ್.ಹೆಚ್. ಲಕ್ಷ್ಮೀಪತಿ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ(ನೋ.ಸಂ.659) ಮತ್ತು ನಿರ್ದೇಶಕರು, ಕವಿಪ್ರನಿನಿ & ವಿಸಕಂಗಳು.
2. ಶ್ರೀ.ಕೆ.ಶಿವಣ್ಣ, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ & ನಿರ್ದೇಶಕರು, ಕವಿಪ್ರನಿನಿ ಮತ್ತು ವಿಸಕಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಕೆ.ಆರ್. ವೃತ್ತ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ವಿಸಕಂಗಳ ಪ.ಜಾ./ಪ.ಪಂ.ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಮಂ ಪಿಂಚಣಿದಾರರ ಸಂಘ, ಬೆಂಗಳೂರು.